ಪತಿ ಎನ್ನುವುದಕ್ಕೂ ಮಿಗಿಲಾಗಿ ರೂಪ, ಗುಣದ ಖನಿಯಾಗಿ ಯುದ್ಧಕೌಶಲ ನಿಪುಣೆಯಾಗಿ ರಾಜನೀತಿಯ ಮರ್ಮಜ್ಞೆಯಾಗಿ ಕೈಕೆಯಿಯು ಒಬ್ಬ ಆದರ್ಶ ಪ್ರಿಯಪತ್ನಿ ಎಂಬುದು ಹಲವರ ಅಂಬೋಣವಾಗಿತ್ತು.

ಒಳಸಂಚು ನಡೆಸುವವರು ಕಪಟ ನೀತಿಯ ನಿಪುಣರಾಗಿರುತ್ತಾರೆ.

ಕೊನೆಗೂ ದಶರಥ ಕಣ್ಣು ತೆರೆದ. ಕೈಕೆಯಿಯ ಮನಮೋಹಕ ಕಣ್ಣುಗಳು ಭೂಗರ್ಭದಾಳದಿಂದ ಕುದಿಯುವ ಲಾವಾ ಹೊರಸೂಸುವ ಹಾಗೆ ಕೆಂಪಡರಿದ್ದವು. ಸಮಾಧಾನದ ಮಾತುಗಳಿಂದ ಆಕೆಯ ಕೋಪಾಗ್ನಿ ಆರುವುದಿಲ್ಲವೆಂದು ಆತನಿಗೆ ಅರಿವಾಯಿತು. ಆಗ ಆತ ವಿನಯ ಮತ್ತು ಆಗ್ರಹದ ಮಾತನಾಡತೊಡಗಿದ.

'... ಕೈಕೆಯಿ, ನಿನ್ನಂಥ ಮೃದುಭಾಷಿಣಿ, ಸತ್ಯನಿಷ್ಠೆ, ಧರ್ಮಪಾಲಕಿ, ಪ್ರಸನ್ನಚಿತ್ತ ಮಹಿಳೆ ಇಂತಹ ಕಾಠಿಣ್ಯ ತಾಳಲಾರಳೆಂದು ನನಗೆ ಗೊತ್ತು...'

ಕೈಕೆಯಿ ಆತನ ವಾಕ್ಯ ಪೂರ್ಣವಾಗಲು ಬಿಡಲಿಲ್ಲ.

'ರಾಜನ್ ನಿಮ್ಮ ವಾಕ್ಚಾತುರ್ಯದಿಂದ ನಾನು ಯಾವತ್ತೂ ಪ್ರಭಾವಿತಳಾಗಿದ್ದೇನೆ. ನಿಮ್ಮನ್ನು ದೇವರ ಸಮಾನವಾಗಿ ಆರಾಧಿಸಿದ್ದೇನೆ. ಆದರೆ ನನಗೆ ಇಂತಹ ಅಪಮಾನವಾಗುವುದೆಂದು ನಾನು ಎಣಿಸಿರಲಿಲ್ಲ...'

'ನಿನಗೆ ಅಪಮಾನ ಮಾಡುವಷ್ಟು ದುಸ್ಸಾಹಸ ಯಾರಲ್ಲಿದೆ...?'

'ನಿಮ್ಮಲ್ಲಿ. ನಾಳೆ ರಾಮನ ರಾಜ್ಯಾಭಿಷೇಕ ನಡೆಯಲಿದೆ ಎಂದು ಮಂತ್ರಿ ಪರಿಷದ್, ಜನಸಮೂಹ, ಸೇವಕ–ದಾಸಿಯರೆಲ್ಲರಿಗೂ ತಿಳಿದಿದೆ. ಆದರೆ ನನ್ನ ಜೊತೆ ಸಮಾಲೋಚಿಸುವ ವಿಷಯ ಹಾಗಿರಲಿ, ನನಗೆ ತಿಳಿಸುವ ಅವಶ್ಯಕತೆಯೂ ನಿಮಗೆ ಉಂಟಾಗಲಿಲ್ಲವಲ್ಲ...!'

'ಹಾಂ, ಇದೇ ಶುಭ ಸಂದೇಶವನ್ನು

